ಅನ್ನುವದು ನಿಜಕ್ಕೂ ಸಾಮಾಜಿಕ ವ್ಯವಸ್ಥೆ ಎನ್ನುವುದಕ್ಕಿಂತ ಮಾನಸಿಕ ವ್ಯವಸ್ಥೆ ಎನ್ನಬಹುದು.'

ಕಾರಿನ ವೇಗ ಕುಂಠಿತವಾಯಿತು. ಸೀತಣ್ಣ ಕಾರನ್ನು ಒಂದು ಪಾನ್–ಬೀಡಾ ಅಂಗಡಿಯೆದುರು ನಿಲ್ಲಿಸಿ ಕೆಳಗಿಳಿದರು. ನಾನೂ ಅವರನ್ನು ಅನುಸರಿಸಿದೆ. ನನ್ನ ತಲೆಯಲ್ಲಿ ಸೀತಣ್ಣ ಹೇಳಿದ ವಿಚಾರದ ಮಂಥನ ಆರಂಭವಾಗಿತ್ತು. ಅವರು ಎರಡು ಸಿಗರೇಟನ್ನು ಕೊಂಡು ಒಂದಕ್ಕೆ ಬೆಂಕಿ ಹಚ್ಚಿ ಇನ್ನೊಂದನ್ನು ನನಗೆ ನೀಡಿದರು. ಇಬ್ಬರೂ ಧೂಮಲೀಲೆಯಲ್ಲಿ ಲೀನರಾಗಿದ್ದರೂ ಮನಸ್ಸು ಇನ್ನೆಲ್ಲೋ ಕಳೆದುಹೋಗಿತ್ತು. ಕಾರು ಮುಂದೆ ಚಲಿಸುತ್ತಿದ್ದಂತೆ ಸೀತಣ್ಣ ಮುಂದುವರಿದರು. 'ಸಂಸಾರಿಯಾಗಿಯೂ ದುಃಖದಿಂದಿರುವವರಿಗಿಂತ ಅವಿವಾಹಿತನಾಗಿಯೂ ತನ್ನ ಏಕಾಂತದ ಕ್ಷಣಗಳನ್ನು ಸಮೃದ್ಧವಾಗಿ, ಆನಂದದಿಂದ ಕಳೆಯುವ, ಸುತ್ತಲಿನ ಬದುಕಿಗೆ ಮನುಷ್ಯರೊಂದಿಗೆ ಸ್ನೇಹದಿಂದ ಕಳೆಯುವವ ನಿಜವಾದ ಕುಟುಂಬಜೀವಿ ಅಂತ ನನಗೆ ಅನ್ನಿಸ್ತದೆ, ಏನಂತೀರಿ?'

ನನ್ನ ಜೀವನವೇ ಚೆನ್ನ, ಶ್ರೇಷ್ಠ ಹಾಗೂ ಆದರ್ಶವಾದದ್ದು ಅಂತ ಯಾವಾಗಲೂ ಭಾವಿಸಿದವ ನಾನು. ಬಹುಶಃ ಪ್ರತಿಯೊಬ್ಬರೂ ಇದೇ ತೆರನಾಗಿ ವಿಚಾರ ಮಾಡುತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ. ಆದರೆ ಇಂದ್ರಕುಮಾರ್ ಎಲ್ಲರಿಗಿಂತ ಭಿನ್ನ, ಅಪರೂಪದವರು ಅಂತ ಒಪ್ಪುವುದಕ್ಕೆ ನನ್ನ ಅಹಂ ಅಥವಾ ಪ್ರೆಸ್ಟೀಜ್ ಅಡ್ಡ ಬರುತ್ತಿದೆಯೇ? ನನ್ನನ್ನೇ ನಾನು ಪ್ರಶ್ನಿಸಿಕೊಂಡೆ. ಆದರೆ ಯಾವುದಕ್ಕೂ ಸೂಕ್ತ ಉತ್ತರ ತಕ್ಷಣ ಹೊಳೆಯಲಿಲ್ಲ. ಜೊತೆಗೆ ಇಂದ್ರಕುಮಾರ್ ಒಂಟಿಯೋ ಅಥವಾ ಸಂಸಾರಿಯೋ– ಅದೂ ಬಗೆಹರಿಯಲಿಲ್ಲ. ಹಾಗಾಗಿ ಸೀತಣ್ಣನವರ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯಿತು.

★★★

ಮುಂದಿನ ಎರಡು ವಾರಗಳು ಯಾಂತ್ರಿಕವಾಗಿ ಉರುಳಿಹೋದವು. ಅದೊಂದು ರಾತ್ರಿ ಊಟ ಪೂರೈಸಿ ಟೀವಿ ನೋಡುತ್ತಿದ್ದೆ. ಅಲ್ಲಿ ಬಿತ್ತರಗೊಳ್ಳುತ್ತಿದ್ದ ಬ್ರೇಕಿಂಗ್ ನ್ಯೂಸ್ ನೋಡಿ ತತ್ತರಿಸಿ ಹೋದೆ. 'ದೊಡ್ಡಬಳ್ಳಾಪುರದ ಕಡೆಯಿಂದ ಬೆಂಗಳೂರಿಗೆ ಬರುತ್ತಿದ್ದ ಬಿ.ಎಂ.ಡಬ್ಲ್ಯೂ. ಕಾರಿಗೆ ಲಾರಿಯೊಂದು ಅಪ್ಪಳಿಸಿದ ಪರಿಣಾಮ ಚಾಲನೆ ಮಾಡುತ್ತಿದ್ದ ಮಧ್ಯವಯಸ್ಸಿನ ಭಾರತಿ ಅನ್ನುವ ಮಹಿಳೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಿಂದಿನ ಸೀಟಿನಲ್ಲಿ ಮಲಗಿದ್ದ ಗೌಡಪ್ಪ ಎನ್ನುವ ಎಂಬತ್ತೆರಡು ವಯಸ್ಸಿನ ವೃದ್ಧರು ಪ್ರಾಣಾಪಾಯವಿಲ್ಲದೆ ಪಾರಾಗಿದ್ದಾರೆ.' ವಾಸ್ತವಕ್ಕೆ ಬರಲು ನನಗೆ ಕೊಂಚ ಸಮಯ ಹಿಡಿಯಿತು. ನೇಹಾಳನ್ನು ಕೂಗಿ, 'ಟೀವಿ ನೋಡು' ಅಂತ ಅವಸರಿಸಿದೆ. 'ಅಯ್ಯೋ ದೇವ್ರೇ' ಅಂತ ಆಕೆ ಗಾಬರಿಯಿಂದ ಕಿರುಚಿಕೊಂಡಳು. ನಾನು ತಕ್ಷಣವೇ ಸೀತಣ್ಣನಿಗೆ ನಾಲ್ಕಾರು ಬಾರಿ ಫೋನಾಯಿಸಿದರೂ ಉತ್ತರ ಬರಲಿಲ್ಲ. ಇಂದ್ರಕುಮಾರ್ ಅವರ ಮೊಬೈಲ್ ನಂಬರ್ ಕೂಡಾ ನನ್ನ ಬಳಿ ಇರಲಿಲ್ಲ. ಮಧ್ಯರಾತ್ರಿಯಾದರೂ ನಿದ್ದೆ ಬಾರದೆ ಅಸಹನೀಯ ಸಂಕಟದಿಂದ ಒದ್ದಾಡಿದೆ. ಮತ್ತೆ ಅದು ಯಾವಾಗ ನಿದ್ದೆ ಆವರಿಸಿತೋ ಅರಿವಾಗಲಿಲ್ಲ.

ಬೆಳಿಗ್ಗೆ ಏಳು ಗಂಟೆಯ ಸುಮಾರಿಗೆ ಸೀತಣ್ಣನ ಫೋನ್, 'ವಿಷಯ ತಿಳೀತಾ ಮೂರ್ತಿ?' ಅವರ ದನಿ ನಡುಗುತ್ತಿತ್ತು. 'ಹೌದು ಸಾರ್' ಅಂದೆ. 'ವೃದ್ಧಾಶ್ರಮದ ಗೌಡಪ್ಪನಿಗೆ ತೀವ್ರವಾದ ಡೆಂಗಿ ಜ್ವರ ಬಂದಿತ್ತು. ದೊಡ್ಡಬಳ್ಳಾಪುರದ ಆಸ್ಪತ್ರೆಗೆ ಹೋದಾಗ ಅವರನ್ನ ಬೆಂಗಳೂರಿನ ಆಸ್ಪತ್ರೆಗೇ ಕರೆದುಕೊಂಡು ಹೋಗಿ ಅಂದರಂತೆ. ಅಷ್ಟರಲ್ಲಿ ಇಂಥಾ ಅವಗಡ ನಡೆದುಹೋಯ್ತು. ನಿನ್ನೆ ರಾತ್ರಿ ನಾನು ನಮ್ಮ ಪಕ್ಕದ್ಮನೆ ಭುಜಂಗರಾಯರ ಸಂಗಡ ಅಲ್ಲಿಗೆ ಹೋಗಿ ಬಂದೆ. ಕುಮಾರ್ ಈ ದುರಂತವನ್ನ ಅದು ಹೇಗೆ ಸಹಿಸಿಕೊಳ್ತಾರೋ ಕಾಣೆ.' ಅವರಿಗೆ ಮುಂದೆ ಮಾತನಾಡಲಾಗಲಿಲ್ಲ.

ಇಂದ್ರಕುಮಾರ್ ತನ್ನ ಸಂಗಾತಿಯನ್ನು ಕಳೆದುಕೊಂಡು ಆಗಲೇ ಎರಡು ವಾರಗಳು